ಐತೆ ಅಂದ್ರು ಯಾವನೂ ಬಂದಿಲ್ವಲ್ಲ ಮಾರಾಯ' ಎಂದ. ಕುಡಿದವರಿಗೆ ಧೈರ್ಯ ಜಾಸ್ತಿಯಂತೆ, ಕರಿಯಣ್ಣ ನಿರ್ಧಾರ ತೆಗೆದುಕೊಂಡೇ ಬಿಟ್ಟ. ಮುಂದಕ್ಕೆ ಬಾಗಿ 'ಹೆಡ್ಡಪ್ಪ ಈ ಕೈ ಹಿಡ್ಕಂಡು ಮ್ಯಾಕೆ ಹತ್ತು... ಮೂರ್ ಜನನೂ ಸೇರಿ ಹಸ ಸ್ವಲ್ಪ ಮ್ಯಾಕೆ ಎಳ್ಕಳನ' ಎಂದು ಕೈಚಾಚಿದ. ಹೆಡ್ಡಪ್ಪ ಗಟ್ಟಿಯಾಗಿ ಹಿಡಿದುಕೊಂಡ. ಹೆಡ್ಡಪ್ಪ ಮೇಲಕ್ಕೆ ಬರುವುದಿರಲಿ ಕರಿಯಣ್ಣನ ಕಾಲುಗಳು ಜಾರುತ್ತಾ ದೇಹವನ್ನು ಕೆಸರೊಳಗೆ ಎಳೆದುಕೊಂಡವು. ಈಗ ಹೊಂಡದೊಳಗೆ ಎರಡರ ಬದಲಿಗೆ ಮೂರು ಜೀವಗಳು.

ಮೇಲೆ ಹಗ್ಗ ಹಿಡಿದು ನಿಂತಿದ್ದ ಹೊನ್ನಮ್ಮನಿಗೆ ದಿಕ್ಕೇ ತೋಚದಂತಾಯಿತು. ಇನ್ನು ಉಳಿಗಾಲವಿಲ್ಲ ಎಂದುಕೊಂಡಳು. ಅಷ್ಟರಲ್ಲಿ ರಸ್ತೆಯಲ್ಲಿ ಸೈಕಲ್ ಸದ್ದಾಯಿತು. ಕುಡಿದು ಹಣ್ಣಾಗಿದ್ದ ಹೆಡ್ಡಪ್ಪನ ಡೈರಿ ಗೆಳೆಯರು ಕೇಕೆ ಹಾಕುತ್ತಾ ಸೈಕಲ್ ತುಳಿಯುತ್ತಿದ್ದರು. ಸದ್ಯ ಇವರಾದರೂ ಬಂದರಲ್ಲ. ಎಲ್ಲಾದರೂ ಸೈಕಲ್ ನಿಲ್ಲಿಸದೆ ಮುಂದೆ ಹೋದರೆ ಕಷ್ಟ ಎಂದುಕೊಳ್ಳುತ್ತಾ ಎಡಗೈಗೆ ಹಗ್ಗ ತೆಗೆದುಕೊಂಡು ಹೋಯ್ ಎಂದು ಜೋರಾಗಿ ಕೂಗುತ್ತಾ ಅವರೆಡೆಗೆ ಕೈಯಾಡಿಸ ತೊಡಗಿದಳು.

ಕೈಯಲ್ಲಿ ಹಗ್ಗ ಜಗ್ಗಿ ಹಿಡಿದು ತಲೆ ಕೆದರಿಕೊಂಡು ಹೊಂಡದ ಮೇಲಿನ ಹೊಯ್ಗೆ ಮಣ್ಣಿನ ದಿಬ್ಬದ ಮೇಲೆ ನಿಂತಿದ್ದ ಅವಳು ಒಬ್ಬನಿಗೆ ರಣಚಂಡಿಯಂತೆ ಕಂಡಳು, ಇನ್ನೊಬ್ಬನಿಗೆ ರುದ್ರಕಾಳಿಯಂತೆ, ಮತ್ತೊಬ್ಬನಿಗೆ ಒನಕೆ ಓಬವ್ವನಂತೆ.

ಅವರಿಗೆ ಹೊಂಡ ತೋಡುವ ದಿನದ ಹೊನ್ನಮ್ಮನ ರೌದ್ರಾವತಾರ ನೆನಪಾಯಿತು.

ಮಾತು ನಿಲ್ಲಿಸಿ ಸೈಕಲಿನಿಂದ ಇಳಿದರು. ಎರಡೂ ಕೈಗಳಲ್ಲಿ ಸೈಕಲ್ಗಳನ್ನು ಮೇಲೆತ್ತಿ ರಸ್ತೆ ಬದಿಯ ಚರಂಡಿ ನೆಗೆದು ಹೊಲಗಳ ಬದುಗಳ ಮೇಲೆ ಸೈಕಲ್ ನೂಕುತ್ತಾ ಊರ ಕಡೆಗೆ ಬಳಸಿ ಓಡತೊಡಗಿದರು.

ಹೊನ್ನಮ್ಮನ ಅದೃಷ್ಟವೊ ಎಂಬಂತೆ ರಾಕೇಶನ ಮೊಪೆಡ್ಡು ಹೊಂಡದ ಕಡೆ ಧಾವಿಸಿ ಬರತೊಡಗಿತು.

'ಬಾಳ ಎಡವಟ್ಟಾಯ್ತು ಮಗಾ, ಹಸಿನ್ ಜೊತೆಗೆ ಒಬ್ರಲ್ಲ, ಇಬ್ರು ಮುಳಿಗ್‌ಕೆಂಡಿದಾರೆ... ಹಂಗೇ ಊರೊಳಕ್ಕೆ ಓಡೋಗಿ ಯಾರನ್ನಾದರೂ ನಾಕ್ ಜನ ಕರ್ಕ ಬರೋಗು' ಎಂದು ಅವನಿಗೆ ಮೊಪೆಡ್ ನಿಲ್ಲಿಸಲೂ ಅವಕಾಶ ಕೊಡದೇ ಹೇಳಿದಳು.

ಪಟೇಲಪ್ಪನ ಮನೆಯ ಮುಂದೆ ನಿಂತಿದ್ದ ಟ್ರ್ಯಾಕ್ಟರಿನಿಂದ ಉಳಿಕೆ ಮಾಂಸ, ಅನ್ನ, ಮುದ್ದೆ, ಪಾತ್ರೆ ಪರಡಿ ಎಲ್ಲಾ ಒಂದಿಬ್ಬರು ಗಂಡಸರು ಇಳಿಸಿಕೊಳ್ಳುತ್ತಿದ್ದರು. ಡೈರಿಗೆ ಹಾಲು ಹಾಕಲು ಒಂದು ಗಂಟೆ ಮಾತ್ರ ಇದ್ದುದರಿಂದ ಹೆಂಗಸರುಗಳು ತರಾತುರಿಯಲ್ಲಿ ಬೆಳಗ್ಗೆ ಕಟ್ಟಿ ಹೋಗಿದ್ದ ಹಸುಗಳನ್ನು ಬಿಚ್ಚಿಕೊಂಡು ಬಂದು, ಮೇವು ಕಲಗಚ್ಚು ಕೊಡುವ ಗಡಿಬಿಡಿಯಲ್ಲಿದ್ದರು. ಅವರಲ್ಲಿ ಕೆಲವರು ಹೊಂಡದ ಬಳಿ ಓಡಿಹೋಗಿ ಇಣುಕಿನೋಡಿ ಕುತೂಹಲ ತಣಿಸಿಕೊಂಡು ಬರತೊಡಗಿದರು.

ಪಟೇಲಪ್ಪ ಅಲ್ಲೇ ಸುಳಿದಾಡುತ್ತಿದ್ದ ಡೈರಿ ಗೆಳೆಯರನ್ನು 'ಏನಿರ್ಲಾ ಡೈರಿಗೆ ಹೋದಾಗ ಅವ್ನ ಜೊತೆ ಹಾಕೆಂಡು ತಿರುಗಾಡ್ತ ಇರ್ತಿರಲ್ಲ... ಈಗ ಅವುನ್ ಕಷ್ಟಕ್ಕೆ ಸಿಕಾಕೊಂಡಿದಾನೆ ಅಂದಾಗ ಅಲ್ಲಿಗೆ ಹೋಗದಲೆ ಊರೊಳಕೆ ಓಡಿ ಬಂದಿದೀರಲ್ಲ... ನಡಿರಿ ಹೊಂಡದ ತಕೆ' ಎಂದು ಗದರಿಸಿದ.

ಇನ್ನುಳಿದ ಗಂಡಸರಿಗೆ 'ಬಿರೀನೆ ಇದೆಲ್ಲ ತೆಗೆದಿಟ್ಟು ಒಳ್ಳೆ ಹಗ್ಗ ಒಂದೆರಡು ಬಡಿಗೆ ಎಲ್ಲನು ತಗಂಡ್ ಬನ್ನಿ' ಎಂದು ಹೇಳಿ 'ನಡಿಲಾ ಮಗಾ ನಾವು ಹೋಗಿ ಏನ್ಮಾಡಾಕಾಗುತ್ತೆ ನೋಡನ' ಎಂದು ರಾಕೇಶನ ಮೊಪೆಡ್ಡಿನ ಹಿಂದಿನ ಸೀಟಿಗೆ ಹತ್ತಿ ಕುಳಿತ.

* * *

ಪಟೇಲಪ್ಪನ ನಿರ್ದೇಶನದಂತೆ, ಹೊಂಡದೊಳಗೆ ಇದ್ದ ಕರಿಯಣ್ಣ ಹಾಗೂ ಹೆಡ್ಡಪ್ಪ ಸೇರಿ ಹಸುವಿನ ಎದೆಯ ಭಾಗಕ್ಕೊಂದು, ಹಿಂದಿನ ತೊಡೆಯ ಹಿಂಭಾಗಕ್ಕೊಂದು ಬಡಿಗೆ ಕಟ್ಟಿ ಅವುಗಳಿಗೆ ಕಟ್ಟಿದ ಹಗ್ಗಗಳನ್ನು ಮೇಲೆ ನಿಂತ ಏಳೆಂಟು ಜನ ಜಗ್ಗಿದರು. ನೀರೊಳಗಿದ್ದವರು ಹಿಂದಿನಿಂದ ಬಡಿಗೆಗೆ ಕೈ ಹಾಕಿ ನೂಕಿದರು.

ಅರ್ಧಗಂಟೆಯ ಪರಿಶ್ರಮದ ನಂತರ ಹಸುವನ್ನು ಹೊಂಡದೊಳಗಿಂದ ಮೇಲಿನ ಬದುವಿಗೆ ಎಳೆದು ಹಾಕಿದರು. ಬೆಳಗ್ಗಿನಿಂದ ಜಗ್ಗಿ ಜಗ್ಗಿ ಹಸುವಿನ ಮೂಗಿನ ಹೊಳ್ಳೆ ಹರಿದು ರಕ್ತ ಹರಿಯುತ್ತಿತ್ತು. ಬದುವಿನ ಮೇಲೆ ಮಲಗಿಸಿದ ಹಸುವಿನ ದೇಹ ಕ್ಷಣಕಾಲ ಕುಲುಕಾಡಿ ತಟಸ್ಥವಾಯಿತು.

ಅದು ಅಲ್ಲಿಂದ ಎದ್ದು ನಿಲ್ಲುವುದಿರಲಿ, ಸಣ್ಣಗೆ ಮಿಸುಕಾಡಲೂ ಇಲ್ಲ.